ಇದಕ್ಕೆ ಬೇಕಾಗುವ ಪರಿಯೋಜನಾ ವರದಿಯನ್ನು ತಯಾರಿಸಲಾಗಿದ್ದು ಇದಕ್ಕೆ ಮಂಡಳಿಯು ಮಂಜೂರಾತಿಯನ್ನು ನೀಡಿದೆ. ಈ ಕೇಂದ್ರಕ್ಕೆ ತಗಲುವ ಅಂದಾಜು ವೆಚ್ಚ 34.44 ಲಕ್ಷ ರೂಪಾಯಿಗಳು. ಈ ಪರಿವರ್ತಕವನ್ನು ಒದಗಿಸಲು ನೂತನ ಸರ್ಕಾರೀ ವಿದ್ಯುತ್ ಕಾರ್ಖಾನೆಗೆ ಕ್ರಯಾದೇಶ ನೀಡಲಾಗಿದ್ದು ಏಪ್ರಿಲ್ ತಿಂಗಳಲ್ಲಿ ಇದು ಸರಬರಾಜಾಗುವ ನಿರೀಕ್ಷೆ ಇದೆ. ಇದಕ್ಕೆ ಬೇಗಾಕುವ 110 ಕೆ.ವಿ. ಬ್ರೇಕರ್ ಸ್ವಿಚ್‌ಗೇರ್ ಮುಂತಾದ ಸಲಕರಣೆಗಳನ್ನು ಒದಗಿಸಲಾಗೂತ್ತಿದ್ದು ಈ ಕಾರ್ಯ ತ್ವರಿತಗತಿಯಲ್ಲಿ ನಿರ್ವಹಿಸಲು ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಈ ಕೆಲಸವು ಮೇ ತಿಂಗಳಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಕೈಗಾರಿಕೆಗಳಿಗಾಗಿ ವಿದ್ಯುಚ್ಛಕ್ತಿಯನ್ನು ಬೇಡಿ ಬರುವ ಅರ್ಜಿಗಳನ್ನು ಪುರಸ್ಕರಿಸಲಾಗುತ್ತಿದ್ದು, ಬೇಕಾಗುವ ವಿದ್ಯುತ್ತನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಮಂಗಳೂರು ವಲಯದ ಮುಖ್ಯ ಅಭಿಯಂತರ(ವಿ) ರು ಈ ಕೆಲಸವನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಕಾರ್ಯೋನ್ಮುಖರಾಗಿದ್ದಾರೆ.

ಪ್ರಕಟಣೆ

ಅಧ್ಯಕ್ಷರು: ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆಯ 9ನೇ ನಿಯಮದ ಮೇರೆಗೆ ಈ ಕೆಳಕಂಡ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಗೈರು ಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಿಕೊಳ್ಳಲುನಾನು ನಿರ್ದೇಶನ ಮಾಡಿದ್ದೇನೆ.

ಶ್ರೀಮತಿ ಮೋಟಮ್ಮ

ಶ್ರೀಮತಿ ಸುಮಾವಸಂತ್

ಶ್ರೀ ಬಿ.ಎಂ. ಇದಿನಬ್ಬ

ಶ್ರೀ ಜಿ.ಎಸ್. ಆಚಾರ್

ಶ್ರೀ ಬಸವರಾಜು ಪಾಟೀಲ್ ಅಟ್ಟೂರ್

CALLING ATTENTION TO MATTERS OF URGENT PUBLIC IMPORTANCE:

1. Shortage of drinking water in Bangalore City

SRI R.V.DESHPANDE: Sir, I call the attention of the Hon'ble Minislter of Urban Development to the acute Shortage of drinking water in Bangalore City.

+ SRI K.J.GEORGE (Minister for Urban Development):

Sir with your permission, I wish to make the following statement.

ಬೆಂಗಳೂರು ನಗರಕ್ಕೆ ಸಾಮಾನ್ಯ ಸ್ಥಿತಿಯಲ್ಲಿ 430 ದಶಲಕ್ಷ ಲೀಟರುಗಳಷ್ಟು ನೀರು ಸರಬರಾಜಾಗುತ್ತಿದ್ದು ಇದರಲ್ಲಿ 280 ದಶಲಕ್ಷ ಲೀಟರ್‌ಗಳಷ್ಟು ಪ್ರಮಾಣ ಕಾವೇರಿ ನದಿಯಿಂದಲೂ 15ದಶಲಕ್ಷ ಲೀಟರ್ ಪ್ರಮಾಣ ಹೆಸರುಘಟ್ಟ ಜಲಾಶಯದಿಂದಲೂ ಮತ್ತು 135 ದಶಲಕ್ಷ ಲೀಟರ್ ಪ್ರಮಾಣವು ತಿಪ್ಪಗೊಂಡನಹಳ್ಳಿ ಜಲಾಶಯದಿಂದಲೂ ದೊರಕ್ಕುತ್ತಿದೆ. ಕಳೆದ ಎರಡು ವರ್ಷಗಳಿಂದ ಅರ್ಕಾವತಿ ಜಲಾನಯನ ಪ್ರದೇಶದಲ್ಲಿ ಮುಂಗಾರು ಮಳೆಯ ವಿಫಲತೆಯಿಂದಾಗಿ ಮೇಲಿನ ಎರಡೂ ಮೂಲಗಳಲ್ಲಿ ನೀರಿನ ಶೇಖರಣೆ ಪ್ರಮಾಣವು ಕಡಿಮೆಯಾಗಿದ್ದು ಜಲಪೂರೈಕೆಯ ದೂರುಗಳ ಹೆಚ್ಚಳಕ್ಕೆ ಕಾರಣವಾಗಿದೆ.